



ಅರುಣ ಪಿ. ಭಟ್ಟ

## ವಾರಭವಿಷ್ಯ: 05.12.2024ರಿಂದ 11.12.2024ರವರೆಗೆ




ನೀವು ಕೈಗೊಳ್ಳುವ ಕೆಲಸದಿಂದ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ. ಆದರೆ ಕೆಲವರು ನಿಮ್ಮನ್ನು ಅವಮಾನಕ್ಕೆ ಗುರಿ ಮಾಡಲಿದ್ದಾರೆ. ವಾರದ ಅಂತ್ಯಕ್ಕೆ ಆರೋಗ್ಯ ಉತ್ತಮವಾಗಿರುತ್ತದೆ. ನಿಮ್ಮ ಕೆಲಸದ ಜೊತೆಜೊತೆಗೆ ಆಹಾರ ಪಥ್ಯದ ಬಗ್ಗೆಯೂ ಕಾಳಜಿ ತೆಗೆದುಕೊಳ್ಳುತ್ತೀರಿ. ಸಮಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಯಶಸ್ಸು ಕಾಣುತ್ತೀರಿ. ಶುಭದಿನ 08. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.

---

ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವರ ಸಂಖ್ಯೆ ಹೆಚ್ಚಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲೂ ಮುಂದಿರುತ್ತೀರಿ. ವಾರದ ದ್ವಿತೀಯಾರ್ಧದಲ್ಲಿ ಕೆಲಸ ಕಾರ್ಯಗಳಲ್ಲಿ ತೊಂದರೆ ಎದುರಾಗುತ್ತದೆ. ಕೋರ್ಟ್ ಕೇಸ್‌ಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತೀರಿ. ವಿರೋಧಿಗಳ ಪಿತೂರಿಯಿಂದ ಹಿನ್ನಡೆ ಆಗುತ್ತದೆ. ವಾತಾವರಣದಲ್ಲಿನ ಬದಲಾವಣೆಯಿಂದ ಅನಾರೋಗ್ಯ ಕಾಡಬಹುದು. ಶುಭದಿನ 09. ಕಾಲಭೈರವನ ಸೇವೆ ಮಾಡಿರಿ.




---




ವಾರದ ಆರಂಭದಿಂದಲೇ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ವ್ಯವಹಾರದಲ್ಲಿ ಬಹಳ ಎಚ್ಚರಿಕೆಯಿಂದ ವ್ಯವಹರಿಸಿ. ಈ ವಾರ ಸ್ವಲ್ಪ ಹೆಚ್ಚೇ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ನಿಮಗೆ ಅನುಕೂಲಕರ ಸನ್ನಿವೇಶ ಇರುತ್ತದೆ. ಕೋರ್ಟ್ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಶುಭದಿನ 11. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.

---

ಮಗ–ಮಗಳು ಇದ್ದಲ್ಲಿ ಅವರ ಮದುವೆ ವಿಚಾರವಾಗಿ ಸಂಬಂಧಿಕರ ಜೊತೆಗೆ ಮಾತುಕತೆ ನಡೆಸಲಿದ್ದೀರಿ. ಈ ವಾರ ಹಲವು ಕೆಲಸಗಳನ್ನು ಪೂರ್ಣಗೊಳಿಸುವಲ್ಲಿ ನಿಮ್ಮ ಗಮನ ಕೇಂದ್ರೀಕೃತವಾಗಿರುತ್ತದೆ. ಇದಕ್ಕಾಗಿ ಕೆಲವರ ಸಹಾಯ ಪಡೆಯುವ ಸಾಧ್ಯತೆ ಇದೆ. ಕೆಲವು ಆರೋಗ್ಯ ಸಮಸ್ಯೆಗಳು ನಿಮ್ಮನ್ನು ಕಾಡಬಹುದು. ವಾರದ ಕೊನೆ ಭಾಗವು ನಿಮಗೆ ಅನುಕೂಲಕರವಾಗಲಿದೆ. ಶುಭದಿನ 06. ಶಿವಕವಚ ಪಠಣ ಮಾಡಿರಿ.




---




ವಾರದ ಶುರುವಿನಿಂದಲೇ ಕೆಲಸಕ್ಕೆ ವೇಗ ನೀಡಲು ಬಹಳ ಪ್ರಯತ್ನ ಮಾಡುತ್ತೀರಿ. ನೀವು ಹಾಕಿದ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯಲಿದ್ದೀರಿ. ನಿಮ್ಮ ಕೆಲಸ ಕಾರ್ಯಗಳಿಗೆ ಬೇಕಾದ ಮಾಹಿತಿಯನ್ನು ಕಲೆ ಹಾಕುತ್ತೀರಿ. ನಿಮ್ಮ ಆರೋಗ್ಯವು ಉತ್ತಮವಾಗಿ ಇರುತ್ತದೆ. ವಾರಾಂತ್ಯದಲ್ಲಿ ವ್ಯಾಪಾರ ವ್ಯವಹಾರ ಲಾಭದಾಯಕವಾಗಿ ಇರುತ್ತದೆ. ಶುಭದಿನ 04. ಲಿಂಗಾಷ್ಟಕ ಪಠಣ ಮಾಡಿರಿ.

---

ನಿಮ್ಮ ವಿವೇಚನೆಯನ್ನು ಸಮರ್ಥವಾಗಿ ಬಳಸುವ ಮೂಲಕ ವ್ಯವಹಾರವನ್ನು ಇನ್ನಷ್ಟು ಉತ್ತಮವಾಗಿ ಮಾಡುತ್ತೀರಿ. ಸಹೋದ್ಯೋಗಿಗಳ ಜೊತೆಗೆ ಉದ್ವಿಗ್ನವಾದ ಸನ್ನಿವೇಶ ಎದುರಾಗುತ್ತದೆ. ಈ ಅವಧಿಯಲ್ಲಿ ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಬಹುತೇಕ ಸಮಸ್ಯೆಗಳಿಗೆ ಪರಿಹಾರಗಳು ದೊರೆಯುತ್ತವೆ. ಶುಭದಿನ 09. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




---




ಈ ವಾರ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸಿ. ಸಣ್ಣ ವಿಚಾರ ಕೂಡ ದೊಡ್ಡ ಬಿಕ್ಕಟ್ಟಾಗಿ ಕಾಡುವ ಸಾಧ್ಯತೆ ಇದೆ. ಈಗ ಮಾಡುತ್ತಿರುವ ವ್ಯಾಪಾರ ವ್ಯವಹಾರ ಮತ್ತಷ್ಟು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಅವಕಾಶ ದೊರೆಯುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಉತ್ತಮ ಹಾಗೂ ಅನುಕೂಲಕರವಾದ ಫಲಿತಾಂಶ ದೊರೆಯಲಿದೆ. ಶುಭದಿನ 07. ಸೌಂದರ್ಯ ಲಹರಿ ಪಠಿಸಿರಿ.

---

ವಾರದ ಮೊದಲ ಭಾಗದಿಂದಲೇ ಆರೋಗ್ಯವಾಗಿ ಇರುತ್ತೀರಿ. ಬಹಳ ಮುಖ್ಯವಾದ ವ್ಯವಹಾರವೊಂದರ ಭಾಗೀದಾರರಾಗಿ ಅಥವಾ ನೀವೇ ಮುಖ್ಯ ಸ್ಥಾನಕ್ಕೆ ನೇಮಕ ಸಾಧ್ಯತೆ ಇದೆ. ರಾಜಕಾರಣಿಗಳಿಗೆ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕಾಗುತ್ತದೆ. ಖರೀದಿ ಮಾಡಬೇಕು ಎಂದು ನೀವು ಲೆಕ್ಕ ಹಾಕಿಕೊಂಡಿದ್ದ ಭೂಮಿಯೊಂದರ ಪರಿಶೀಲನೆ ನಡೆಸುವ ಸಾಧ್ಯತೆ ಇದೆ. ಶುಭದಿನ 10. ಲಕ್ಷ್ಮೀನಾರಾಯಣ ಹೃದಯ ಪಠಿಸಿರಿ.




---




ವಾರದ ಶುರುವಿನಿಂದಲೇ ವ್ಯಾಪಾರಸ್ಥರು ಉದ್ಯೋಗಸ್ಥರು ತಮ್ಮ ವ್ಯಾಪಾರ ಉದ್ಯಮದ ಪ್ರಗತಿಯ ಪರಿಶೀಲನೆ ಮಾಡುವುದರಲ್ಲಿ ಸಕ್ರಿಯರಾಗುತ್ತೀರಿ. ನಿಮ್ಮ ಕಾರ್ಯಗಳನ್ನು ಈ ಹಿಂದೆಂದಿಗಿಂತಲೂ ವೇಗವಾಗಿ ಮಾಡಲಿದ್ದೀರಿ. ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಕೆಲಸ ಕಾರ್ಯಗಳನ್ನು ಪೂರ್ಣ ಮಾಡಲು ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಶುಭದಿನ 08. ವಿಷ್ಣು ಸಹಸ್ರನಾಮ ಓದಿರಿ.

---

ಈ ವಾರ ಬಹಳ ಸಂತೋಷವಾಗಿ ಇರುತ್ತೀರಿ. ಆದಾಯಕ್ಕೆ ಸಂಬಂಧಿಸಿದ ಮೂಲಗಳಿಂದ ಉತ್ತಮ ಲಾಭ ಪಡೆಯಬಹುದು. ವಿದ್ಯಾರ್ಥಿಗಳಿಗೆ ಯಶಸ್ಸು ಪಡೆಯುವ ಅವಕಾಶಗಳು ದೊರೆಯಲಿವೆ. ಮಗ–ಮಗಳ ಮದುವೆಯ ವಿಚಾರವನ್ನು ಅಂತಿಮಗೊಳಿಸುವ ಅವಕಾಶ ಇದೆ. ಕ್ರೀಡಾ ಕ್ಷೇತ್ರದಲ್ಲಿ ಇರುವವರಿಗೆ ಅತ್ಯುತ್ತಮ ಅವಕಾಶ ದೊರೆಯಲಿದೆ. ಶುಭದಿನ 10. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




---




ವಾರದ ಶುರುವಿನಿಂದಲೇ ಉದ್ಯೋಗ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡುವ ಅವಕಾಶಗಳಿವೆ. ವಾರದ ಆರಂಭದಲ್ಲಿ ಆರೋಗ್ಯ ಉತ್ತಮವಾಗಿ ಇರುತ್ತದೆ. ನಿಮ್ಮ ಪೋಷಕರಿಗೆ ಹೆಚ್ಚಿನ ಗೌರವ ನೀಡುತ್ತೀರಿ. ನಿಮ್ಮ ಆದಾಯ ಉತ್ತಮವಾಗಿರುತ್ತದೆ. ಸಾಮಾಜಿಕವಾಗಿ ಗೌರವ ಮನ್ನಣೆಗಳನ್ನು ಪಡೆಯಲಿದ್ದೀರಿ. ಮಕ್ಕಳ ಪ್ರಗತಿಯಿಂದ ಸಮಾಧಾನ ದೊರೆಯಲಿದೆ. ಶುಭದಿನ 07. ಸುಬ್ರಮಣ್ಯ ಜಪ ಮಾಡಿರಿ.

---

ಸಣ್ಣ ಪ್ರವಾಸ ಮಾಡಬೇಕಾಗಬಹುದು. ಸಂಸ್ಥೆಯೊಂದರ ಜೊತೆ ಮಹತ್ತರವಾದ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ಕುಟುಂಬದ ಬಗ್ಗೆ ಹೆಚ್ಚು ಯೋಚನೆ ಮಾಡಲಿದ್ದೀರಿ. ವ್ಯಾಸಂಗದಲ್ಲಿ ವಿದ್ಯಾರ್ಥಿಗಳಿಗೆ ಪ್ರಗತಿ ಇದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆದಾಯದಲ್ಲಿ ಹೆಚ್ಚಳ ಆಗುತ್ತದೆ. ಇದರಿಂದ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನ ಹೆಚ್ಚಾಗಲಿದೆ. ಶುಭದಿನ 06. ಶ್ರೀ ದುರ್ಗಾ ಆರಾಧನೆ ಮಾಡಿರಿ.

